KATK900001482022

# 5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತಿಪಟೂರು.

## ಎಸ್.ಸಿ ಸಂಖ್ಯೆ: 10004/2022

**ಪ್ರಮಾಣೀಕರಿಸಿದ ದಿನಾಂಕ:** 03-10-2023
**ಚಾಸಾ.**4
**ಫ್ರಾಸಾ.**1

| | |
|---|---|
| ಹೆಸರು | ಬಸವರಾಜು |
| ತಂದೆ ಹೆಸರು | ಮಲ್ಲಿಕಾರ್ಜುನಯ್ಯ |
| ವಯಸ್ಸು | 51 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ತಮ್ಮಡಿಹಳ್ಳಿ, ಹಂದನಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ದಿನಾಂಕ: 15.06.2016 ರಂದು ನಾನು ನಡುವನಹಳ್ಳಿ ಗೇಟ್ ನ ಬಳಿ ಹೋಗಿದ್ದೆ. ನನ್ನೊಂದಿಗೆ ನಿರಂಜನ್ ಸಹ ಇದ್ರು. ಪೊಲೀಸನವರು ಅಲ್ಲಿ ಮಹಜರ್ ಮಾಡಿದ್ರು. ಸರ ಕಿತ್ತುಕೊಂಡು ಹೋಗಿದ್ದಾರೆ ಎನ್ನುವಕಾರಣಕ್ಕೆ ಮಾಡಿದ್ರು. ಎರಡು ಗಾಡಿಗಳಲ್ಲಿ 4 ಜನ ಬಂದು ಕಿತ್ತುಕೊಂಡು ಹೋದರು ಎನ್ನುವ ಕಾರಣಕ್ಕೆ ಮಹಜರ್ ಮಾಡಿದ್ರು. ಆ ಸಂದರ್ಭದಲ್ಲಿ ಗೌರಮ್ಮನವರಿಗೆ 4 ಜನರು ಮಚ್ಚು ತೋರಿಸಿದ್ರಂತೆ. ಗೌರಮ್ಮನವರೇ ಆ ದಿನ ಸ್ಥಳ ತೋರಿಸಿದ್ದು. ಗೌರಮ್ಮನವರೇ 4 ಜನ ಬಂದು ಮಚ್ಚು ತೋರಿಸಿ ಸರ ಕಿತ್ತುಕೊಂಡು ಹೋದರು ಎಂದು ಹೇಳಿದ್ರು. ನನ್ನೊಂದಿಗೆ ಮಹಜರ್ ಗೆ ಸಹಿ ಗೌರಮ್ಮ ಮತ್ತು ನಿರಂಜನ್ ಸಹಿ ಮಾಡಿದ್ರು. ಇದು ಮಹಜರ್. (ಸಾಕ್ಷಿ ಗುರುತಿಸಿದ್ದು ನಿ.ಪಿ-1 ಎಂದು ಗುರುತಿಸಲಾಯಿತು). ಇದು ನನ್ನ ಸಹಿ. (ಸಾಕ್ಷಿ

ಗುರುತಿಸಿದ್ದು ನಿ.ಪಿ-1(ಎ) ಎಂದು ಗುರುತಿಸಲಾಯಿತು). ಮಹಜರ್ ಮಾಡಿದ ಸಮಯ ಮಧ್ಯಾಹ್ನ 12.30 ರಿಂದ 1.30 ಗಂಟೆಯಾಗಿತ್ತು.

**ಪಾಟೀಸವಾಲು, *1* ರಿಂದ *3* ನೇ ಆರೋಪಿತರ ಪರ ಶ್ರೀ.ಸಿ.ವಿ. ವಕೀಲರಿಂದಃ**

ಪೊಲೀಸನವರು ನನಗೆ ಮಹಜರ್ ಗೆ ಬರಲು ನೋಟೀಸ್ ಕೊಟ್ಟಿಲ್ಲ. ನಾನು ನಮ್ಮ ನೆಂಟರ ಮನೆಗೆ ಹೋಗಿದ್ದೆ. ಆಗ ಪೊಲೀಸನವರು ಈ ಕೇಸಿಗೆ ಸಾಕ್ಷಿದಾರರಾಗುತ್ತೀರಾ ಎಂದು ಕೇಳಿದ್ರು, ನಾನು ಒಪ್ಪಿದೆ. ನಮ್ಮ ಊರಿಗೂ ಮತ್ತು ಆ ಸ್ಥಳಕ್ಕೂ 25 ಕಿ.ಮೀ ದೂರ ಇರಬಹುದು. ಮಹಜರ್ ನಲ್ಲಿ ನಾನು ನೆಂಟರ ಮನೆಗೆ ಹೋಗಿದ್ದ ವಿಚಾರ ಹೇಳಿ ಬರೆಸಲಿಲ್ಲ. ನಿರಂಜನ್ ಮೂರ್ತಿ ನಮ್ಮ ಊರಿನವರೆ ಎಂದರೆ ಸರಿ. ಮಹಜರ್ ನಲ್ಲಿ ಏನು ಬರೆದಿದೆಯೋ ನನಗೆ ಗೊತ್ತಿಲ್ಲ ಎಂದರೆ ನಾನು ಮಹಜರ್ ನಲ್ಲಿ ಈಗ ಏನು ಹೇಳಿದ್ದೇನೆಯೋ ಅಷ್ಟು ಮಾತ್ರ ಬರೆದಿದ್ದಾರೆ. ನಾನು ಸಹಿ ಹಾಕಿದಾಗ ಸಮಯ 12.30 ರಿಂದ 1.00 ಗಂಟೆ ಇರರಬಹುದು. ಪೊಲೀಸನವರು ಮಹಜರ್ ನ ಬರವಣಿಗೆ ಮಾಡಿದ್ದು. 4 ಜನ ಪೊಲೀಸನವರು ಬಂದಿದ್ದರು. ಸಮವಸ್ತ್ರದಲ್ಲಿ ಸ್ಟಾರ್ ಇದ್ದಂತಹ ಪೊಲೀಸನವರು ಇದ್ರು. 4 ಜನ ಸಮವಸ್ತ್ರದಲ್ಲಿ ಇದ್ರು. ಅದರಲ್ಲಿ ಒಬ್ಬರು ಬರವಣಿಗೆ ಮಾಡಿದ್ರು. ಮಹಜರ್ ನ್ನು ನಾನು ಓದಲಿಲ್ಲ. ಪೊಲೀಸನವರು ಓದಿ ಹೇಳಿದ್ರು. ನಾನು ಒಂದೇ ಸಹಿ ಮಾಡಿದ್ದು. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಮಹಜರ್ ನಲ್ಲಿ ಸಹಿ ಮಾಡಿದಾಗ 1.30 **P.M** ಎಂದು ಬರೆದಿದ್ರು.

ನಾನು ಹೋಗಿದ್ದ ಜಾಗದ ಚೆಕ್ಕುಬಂದಿ ಹೇಳಲು ಆಗಲ್ಲ. ಟಾರ್ ರಸ್ತೆಯ ಪಕ್ಕದಲ್ಲಿ ಮಣ್ಣು ಇರುತ್ತಲ್ಲ ಅಲ್ಲಿ ಮಹಜರ್ ಮಾಡಿದ್ರು. ಆ ಜಾಗದಲ್ಲಿ ಅಂಗಡಿ ಮನೆಗಳು ಇರಲಿಲ್ಲ.

ಮಹಜರ್ ಬರೆದಿದೆ ಎನ್ನಲಾದ ಜಾಗಕ್ಕೆ ನಾನು ಹೋಗಿಯೇ ಇಲ್ಲ ಎಂದರೆ ಸರಿಯಲ್ಲ. ಅಲ್ಲಿ ಗೌರಮ್ಮ ಮತ್ತು ನಿರಂಜನ್ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಮಹಜರ್ ಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗೌರಮ್ಮ, ನಿರಂಜನ್ ಎಲ್ಲರೂ ಒಂದೇ ಜಾತಿಯವರು ಎಂದರೆ ಸರಿ. ಆದರೆ, ನೆಂಟರಿಷ್ಟರಲ್ಲ.

*(4* ನೇ ಆರೋಪಿ ಪರ ಶ್ರೀ.ಬಿ.ಎಸ್. ವಕೀಲರು *1* ರಿಂದ *3* ನೇ ಆರೋಪಿತರ ಪರ ಶ್ರೀ.ಸಿ.ವಿ ವಕೀಲರು ಮಾಡಿದ ಪಾಟೀಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ*).*

*(*ಮರು ವಿಚಾರಣೆ ಇಲ್ಲವೆಂದಿದ್ದಾರೆ*).*

*(*ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು*).*

ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ

(ಪುಷ್ಪಾವತಿ.ವಿ)
*5* ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತಿಪಟೂರು